**ದಿನಾಂಕ 29.07.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎಂ.ಆರ್ ವಕೀಲರಿಂದಃ

ಆರೋಪಿತರು ವಿವಾಹ ಪೂರ್ವದಲ್ಲಿಯೇ ನಮ್ಮ ಸಂಬಂಧಿಕರು ಎಂದರೆ ಸಾಕ್ಷಿ ಮದುವೆ ಸಮಯದಲ್ಲಿ ಗೊತ್ತಿರಲಿಲ್ಲ, ಆನಂತರದಲ್ಲಿ ಗೊತ್ತಾಗಿದೆ ಎಂದು ಹೇಳುತ್ತಾರೆ. ಆದರೆ ನನ್ನ ತಂದೆ ತಾಯಿಯವರೆಗೆ ಮದುವೆ ಪೂರ್ವದಲ್ಲಿಯೇ ಆರೋಪಿತರು ಸಂಬಂಧಿಕರು ಎಂದು ಗೊತ್ತಿತ್ತು. ನನ್ನ ತಂಗಿಯ ಮದುವೆಯನ್ನು ಮಾಡುವ ಉದ್ದೇಶದಿಂದ ಮನೆಯನ್ನು ಮಾರಾಟ ಮಾಡಿದ್ದೇವೆ ಎಂದರೆ ಹೌದು. ಆರೋಪಿತರಿಗೆ ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಮದುವೆ ಪೂರ್ವದಲ್ಲಿ ಗೊತ್ತಿತ್ತು ಎಂದರೆ ಹೌದು. ನಿಶ್ಚಿತಾರ್ಥ ಸಮಯದಲ್ಲಿ ಹಾಗೂ ಮದುವೆ ಸಮಯದಲ್ಲಿ ಇಷ್ಟೇ ಚಿನ್ನವನ್ನು ಕೊಡಬೇಕೆಂದು ಬೇಡಿಕೆ ಇರಲಿಲ್ಲ. ಮದುವೆ ಖರ್ಚನ್ನು ಆರೋಪಿತರು ಹೇಳಿದ್ದಕ್ಕೆ ನಾವು ಮತ್ತು ಆರೋಪಿತರು ಸಮನಾಗಿ ಭರಿಸಿದ್ದೇವೆ. ಮದುವೆಗೆ ಯಾವುದೇ ಉಡುಗೊರೆ ಇರಲಿಲ್ಲ, ಬರೀ ಆಶೀರ್ವಾದ ಇತ್ತು. ನನ್ನ ಮುಂದೆ ವರದಕ್ಷಿಣೆಯ ಯಾವುದೇ ಬೇಡಿಕೆ ಇರಲಿಲ್ಲ. ವರದಕ್ಷಿಣೆ ಬೇಡಿಕೆ ಇಟ್ಟಿದ್ದಾರೆ ಎಂದು ಚಾಸಾ1 ರವರು ನನಗೆ ಹೇಳಿರುತ್ತಾರೆ. ಬೈಯುತ್ತಾರೆ ಮತ್ತು ಹೊಡೆಯುತ್ತಾರೆ ಎಂಬ ವಿಚಾರವು ನನ್ನ ತಂಗಿ ಹೇಳಿ ಗೊತ್ತಾಗಿರುತ್ತದೆ, ನಾವು ಕಣ್ಣಾರೆ ನೋಡಿರುವುದಿಲ್ಲ.

2. ಮದುವೆಯು ದಿಃ 20.1.2022 ರಲ್ಲಿ ಆಗಿದ್ದು ಚಾಸಾ1 ರವರು ಕೊನೆಯದಾಗಿ ನಮ್ಮ ಮನೆಗೆ ದಿಃ 3.4.2022 ರಲ್ಲಿ ಬಂದಿದ್ದಾರೆ ಎಂದರೆ ಹೌದು. ಮದುವೆಯಾಗಿ ಚಾಸಾ1 ರವರು ಗಂಡನ ಮನೆಗೆ ಹೋದ ನಂತರ ಒಂದು ತಿಂಗಳು ಬಿಟ್ಟು ನಮ್ಮ ಮನೆಗೆ ಬಂದಿದ್ದರು. ಬಂದವರು ನಮ್ಮ ಮನೆಯಲ್ಲಿ 3 ರಿಂದ 4 ದಿನ ಇದ್ದು ಪುನಃ ಹೊರಟುಹೋಗಿರುತ್ತಾರೆ. ದಿಃ 3.4.2022 ರ ಪೂರ್ವದಲ್ಲಿ ಚಾಸಾ1 ರವರಿಗೆ ಹೊಡೆದ ವಿಚಾರವಾಗಲಿ ಬೈದ ವಿಚಾರವಾಗಲಿ ಅಥವಾ ವರದಕ್ಷಿಣೆ ಬೇಡಿಕೆ ಇಟ್ಟ ವಿಚಾರವನ್ನು ಚಾಸಾ1 ರವರು ನನಗೆ ಹೇಳಿರುವುದಿಲ್ಲ. ನನ್ನ ಪ್ರಕಾರ ವರದಕ್ಷಿಣೆ ಬೇಡಿಕೆ, ಬೈದ ವಿಚಾರ ಮತ್ತು ಹೊಡೆದ ವಿಚಾರವನ್ನು ನನ್ನ ತಾಯಿಯ ಹತ್ತಿರ ದಿಃ 3.4.2022 ರ ಪೂರ್ವದಲ್ಲಿ

ಹೇಳಿರುತ್ತಾರೆ. ಮದುವೆಯಾದ ಸ್ವಲ್ಪ ದಿನದಲ್ಲಿಯೇ ಹೇಳಲು ಪ್ರಾರಂಭಿಸಿದ್ದಾರೆ ಎಂದರೆ ಇರಬಹುದು. ನಮ್ಮ ಮನೆ ಚಿಕ್ಕ ಸಂಸಾರ ಮತ್ತು ಎಲ್ಲರೂ ಒಟ್ಟಿಗೆ ಇದ್ದ ಕಾರಣ ಮನೆಯಲ್ಲಿ ಯಾವುದೇ ಚಿಕ್ಕ ಸಮಸ್ಯೆ ಬಂದರೂ ನಮ್ಮ ತಾಯಿಯವರು ನಮ್ಮಲ್ಲಿ ಹೇಳುತ್ತಾರೆ ಎಂದರೆ ಹೌದು. ಚಾಸಾ2 ರವರಿಗೂ ಸಹ ದಿಃ 3.4.2022 ರ ಪೂರ್ವದಲ್ಲಿ ವರದಕ್ಷಿಣೆ ವಿಚಾರ, ಬೈದ ವಿಚಾರ ಮತ್ತು ಹೊಡೆದ ವಿಚಾರ ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಚಾಸಾ2 ರವರಿಗೆ ಆ ವಿಚಾರ ದಿಃ 3.4.2022 ರ ಪೂರ್ವದಲ್ಲಿ ಗೊತ್ತಿದ್ದರೆ ಆತ ನಿಮಗೆ ಹೇಳುತ್ತಿದ್ದ ಎಂದರೆ ಗೊತ್ತಿಲ್ಲ. ವರದಕ್ಷಿಣೆ ವಿಚಾರ, ಬೈದ ವಿಚಾರ ಮತ್ತು ಹೊಡೆದ ವಿಚಾರವನ್ನು ನನ್ನ ತಾಯಿ ದಿಃ 3.4.2022 ರ ಪೂರ್ವದಲ್ಲಿ ನನ್ನ ಜೊತೆ ಹೇಳಿರುವುದಿಲ್ಲ. ನಿಮ್ಮ ತಂದೆಯವರ ಹತ್ತಿರ ಹೇಳಿದ್ದಾರಾ ಎಂದರೆ ಗೊತ್ತಿಲ್ಲ.

3. ಮದುವೆಯಾದ ನಂತರ ನಾನು ಒಂದು ಬಾರಿ ಚಾಸಾ1 ರವರ ಮನೆಗೆ ಹೋಗಿದ್ದೆ. ಈ ಪ್ರಕರಣ ದಾಖಲಾದ ನಂತರ ಆರೋಪಿತರ ಮನೆಗೆ ಹೋಗಿದ್ದೀರಾ ಎಂದರೆ ಇಲ್ಲ. ನಾನು 1 ನೇ ಆರೋಪಿಯ ಜೊತೆ ದೂರವಾಣಿ ಸಂಪರ್ಕದಲ್ಲಿ ಯಾವತ್ತೂ ಸಹ ಇರಲಿಲ್ಲ, ಆದರೆ ಯಾವಾಗಲಾದರೂ ಒಮ್ಮೆ ವಾಟ್ಸಾಪ್ ನಲ್ಲಿ ಹಾಯ್, ಬಾಯ್ ಹೇಳುತ್ತಿದ್ದೆವು. 2 ನೇ ಆರೋಪಿಯ ಜೊತೆ ನಾನು ಯಾವುದೇ ದೂರವಾಣಿ ಸಂಪರ್ಕವಾಗಲಿ, ವಾಟ್ಸಾಪ್ ಮೂಲಕವಾಗಲಿ ಸಂಪರ್ಕದಲ್ಲಿ ಇರಲಿಲ್ಲ. ಎಲ್ಲರೂ ಚೆನ್ನಾಗಿದ್ದಾಗ ಮದುವೆ ಪೂರ್ವದಲ್ಲಿ 1 ನೇ ಆರೋಪಿಯ ಹತ್ತಿರ ಚಾಸಾ1 ರವರು ಸ್ವಲ್ಪ ಹಠದ ಸ್ವಭಾವ, ಆಕೆಯನ್ನು ಅಡ್‌ಜೆಸ್ಟ್ ಮಾಡಿಕೊಳ್ಳಿ ಎಂದು ಹೇಳಿದ್ದೀರಾ ಎಂದರೆ ಇಲ್ಲ. ಸುರೇಶ್ ಭಂಡಾರಿ ರವರ ಮಧ್ಯಸ್ಥಿಕೆಯಲ್ಲಿ ರಾಜಿ ಪಂಚಾಯತಿಗೆ ಸಂಬಂಧಪಟ್ಟಂತೆ ಮುಂಬೈಗೆ ಹೋಗಿದ್ದಾಗ ನೀವೇನಾದರೂ ವಿಡಿಯೋ, ಆಡಿಯೋ ರೆಕಾರ್ಡ್ ಮಾಡಿ ಎಂದು ಸಲಹೆ ಕೊಟ್ಟಿದ್ದೀರಾ ಎಂದರೆ ಇಲ್ಲ.

4. ಚಾಸಾ1 ರವರು ಮದುವೆಯಾದ ನಂತರ ಮಂಗಳೂರು ಸಾಫ್ಟ್ ವೇರ್ ಕಂಪನಿಯಲ್ಲಿ ಕೆಲಸದಲ್ಲಿದ್ದರು, ಈಗ ಕೆಲಸ ಬಿಟ್ಟಿರುತ್ತಾರೆ. 1 ನೇ ಆರೋಪಿಯ ಜೊತೆ ಬೇರೆಯವರ ಅನೈತಿಕ ಸಂಬಂಧ ಇದ್ದ ಬಗ್ಗೆ ನಿಮ್ಮ ಹತ್ತಿರ ದಾಖಲೆ ಇದೆಯಾ ಎಂದರೆ ಸಾಕ್ಷಿ ಚಾಸಾ1 ರವರ ಹತ್ತಿರ ಇದೆ ಎಂದು ಹೇಳುತ್ತಾರೆ. ಅದನ್ನು ಪೊಲೀಸರಿಗೆ ಕೊಡಲು ತೊಂದರೆ ಇತ್ತಾ ಎಂದರೆ ಕೊಟ್ಟಿದ್ದಾರೆ. ನಿಶ್ಚಿತಾರ್ಥ ಪೂರ್ವದಲ್ಲಿ ನನ್ನ ತಂಗಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಲಂಡನ್‌ಗೆ ಹೋಗಬೇಕೆಂದು ಪ್ರಸ್ತಾಪ ಇತ್ತು. ಚಾಸಾ1 ರವರ ವಿದ್ಯಾಭ್ಯಾಸ ಮುಗಿದು 3 ತಿಂಗಳಲ್ಲಿ ಮದುವೆಯಾಗಿರುತ್ತದೆ. ಒಂದು ವೇಳೆ ಚಾಸಾ1 ರವರು

ಲಂಡನ್‌ಗೆ ಹೋಗುವುದಾದರೆ 70 ಲಕ್ಷದಿಂದ 1 ಕೋಟಿಯವರೆಗೆ ಖರ್ಚಾಗುತ್ತಿತ್ತು ಎಂದರೆ ಗೊತ್ತಿಲ್ಲ. ಚಾಸಾ1 ರವರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಲಂಡನ್‌ಗೆ ಹೋಗಲು ಅವಕಾಶ ಮಾಡಿಕೊಡಬೇಕೆಂದು 1 ನೇ ಆರೋಪಿಯನ್ನು ಕೇಳಿದ್ದರು ಎಂದರೆ ಇಲ್ಲ. ಆ ಬೇಡಿಕೆಗಳನ್ನು ಪೂರೈಸದ ಕಾರಣ ಮತ್ತು ಚಾಸಾ1 ರವರ ಹಠಮಾರಿತನ ಈ ಎಲ್ಲಾ ವಿವಾದಕ್ಕೆ ಕಾರಣವಾಗಿದೆ ಎಂದರೆ ಇಲ್ಲ. ಮದುವೆ ಮುರಿದುಬೀಳಲು ಚಾಸಾ1 ರವರೇ ಕಾರಣ ಎಂದರೆ ಇಲ್ಲ. ಸುಳ್ಳು ಆರೋಪಗಳನ್ನು ಹಾಕಿ ಹಣ ವಸೂಲಿ ಮಾಡುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

5. ನಾನು ಚಾಸಾ2, 4 ಮತ್ತು 5 ರವರು ಒಂದು ದಿನ ಪೊಲೀಸ್ ಠಾಣೆಗೆ ಹೋಗಿದ್ದು ಪೊಲೀಸರು ಬೆರಳಚ್ಚು ಮಾಡಿದ ಹೇಳಿಕೆಗೆ ಸಹಿ ಮಾಡಿದ್ದೇವೆ ಎಂದರೆ ಹೌದು. ಚಾಸಾ1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)